ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570 005

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿ ಮೂಲೆ ಮತ್ತು ಮಧ್ಯಂತರ ನಿವೇಶನಗಳು ಹಾಗೂ ಮನೆಯ ಇ–ಹರಾಜು ಪ್ರಕಟಣೆ

ಇ–ಹರಾಜು ಪ್ರಕಟಣೆ

ಸಂಖ್ಯೆ/ಮೈ.ನ.ಪ್ರಾ/ಇ.ಹ.ಪ್ರ/03/2016–17 ದಿನಾಂಕ: 09.11.2016

ಕನಿಷ್ಠ ಬಿಡ್ ಬದಲಾವಣೆ ಮೊತ್ತ ಕ್ರ.ಸಂ.1, 6, 16, 17, 22, 23 ಮತ್ತು 25 ರ ನಿವೇಶನಗಳಿಗೆ ರೂ.1,00,000/– ಗಳು ಹಾಗೂ ಉಳಿದ ನಿವೇಶನಗಳಿಗೆ ರೂ.10,000/– ಗಳು

ಇ–ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 18.11.2016 ಭಾರತೀಯ ಕಾಲಮಾನ ಮಧ್ಯಾಹ್ನ 18.00 ಗಂಟೆಯ ನಂತರ

ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 24.11.2016 ಭಾರತೀಯ ಕಾಲಮಾನ 18.00 ಗಂಟೆವರೆಗೆ

ಇ–ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ: 28.11.2016 ಭಾರತೀಯ ಕಾಲಮಾನ 18.00 ಗಂಟೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಇ–ಹರಾಜಿನಲ್ಲಿ ಭಾಗವಹಿಸಲು ಪಾವತಿ ಮಾಡಬೇಕಾದ ಇಎಂಡಿ ಹಣ : ಕ್ರ.ಸಂ.1, 6, 16, 17, 22, 23 ಮತ್ತು 25 ರ ನಿವೇಶನಗಳಿಗೆ ರೂ.3,00,000/– ಗಳು ಹಾಗೂ ಉಳಿದ ನಿವೇಶನಗಳಿಗೆ ರೂ.75,000/– ಗಳು

ಇ–ಹರಾಜಿನಲ್ಲಿ ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ನಿವೇಶನಗಳ ವಿವರಕ್ಕೆ ಸಂಪರ್ಕಿಸಬೇಕಾದ ಅಂತರ್ಜಾಲ https : // www.eproc.karnataka.gov.in

ಕ್ರಮ ಸಂ.	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಅಳತೆ ಮೀ ಗಳಲ್ಲಿ		ವಿಸ್ತೀರ್ಣ ಚ.ಮೀ ಗಳಲ್ಲಿ	ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ (ರೂ.ಲಕ್ಷಗಳಲ್ಲಿ)	ಷರಾ
			ಉ–ದ	ಪೂ–ಪ			
1	ಜೆ.ಪಿ.ನಗರ 1ನೇ ಹಂತ 'ಎ' ಬ್ಲಾಕ್	35/ಎ	22.10	17.30	382.33	115.24	ಮಧ್ಯಂತರ
2	ಜೆ.ಪಿ.ನಗರ 1ನೇ ಹಂತ 'ಬಿ' ಬ್ಲಾಕ್	16/ಎ	18.00	13.50	243.00	60.17	ಮಧ್ಯಂತರ
3	ಜೆ.ಪಿ.ನಗರ 2ನೇ ಹಂತ	272/ಡಿ	10.50	15.00	157.50	44.08	ಮಧ್ಯಂತರ
4	ಶ್ರೀರಾಂಪುರ 2ನೇ ಹಂತ	542	13.00	6.70	87.10	21.57	ಮಧ್ಯಂತರ
5	ಶ್ರೀರಾಂಪುರ 3ನೇ ಹಂತ	1842/ಬಿ	(13.60+5.40)/2	12.60	119.70	25.77	ಮೂಲೆ
6	ದಟ್ಟಗಳ್ಳಿ 2ನೇ ಹಂತ 'ಐ' ಬ್ಲಾಕ್	712	18.50	17.50	323.75	139.41	ಮೂಲೆ
7	ದಟ್ಟಗಳ್ಳಿ 3ನೇ ಹಂತ	4169/ಸಿ	(10.37+14.19)/2	18.10	222.27	71.78	ಮೂಲೆ
8	ದಟ್ಟಗಳ್ಳಿ 3ನೇ ಹಂತ	4915	21.00	12.00	252.00	81.38	ಮೂಲೆ
9	ದಟ್ಟಗಳ್ಳಿ 3ನೇ ಹಂತ	4921	9.00	12.00	108.00	29.07	ಮಧ್ಯಂತರ
10	ದಟ್ಟಗಳ್ಳಿ 3ನೇ ಹಂತ	4922	9.00	12.00	108.00	29.07	ಮಧ್ಯಂತರ
11	ದಟ್ಟಗಳ್ಳಿ 3ನೇ ಹಂತ	4928	9.00	12.00	108.00	29.07	ಮಧ್ಯಂತರ
12	ಬೋಗಾದಿ ಉ.ಅಂ.ಸ.ಆ.ಇಂ.ಕ. ಪಕ್ಕದ ಬಡಾವಣೆ	45	(13.00+12.50)/2	15.90	202.73	48.01	ಮೂಲೆ
13	ಬೋಗಾದಿ ಉ.ಭಾ.ಪು.ಸ.ಇ.ಕ.ಪ.ಭಾಗ	71	12.00	18.00	216.00	53.48	ಮಧ್ಯಂತರ
14	ಬೋಗಾದಿ ಶಾರದಾದೇವಿನಗರ (ಹುಡ್ಕೋ)	1543/ಎ	(13.70+14.00)/2	(9.40+9.00)/2	127.42	35.66	ಮೂಲೆ
15	ವಿಜಯನಗರ 4ನೇ ಹಂತ 1ನೇ ಘಟ್ಟ	977	9.00	(6.60+2.50)/2	40.95	12.34	ಮೂಲೆ
16	ವಿಜಯನಗರ 4ನೇ ಹಂತ 2ನೇ ಘಟ್ಟ	771	24.00	(18.00+23.50)/2	498.00	187.63	ಮೂಲೆ
17	ವಿಜಯನಗರ 4ನೇ ಹಂತ 2ನೇ ಘಟ್ಟ	3136	(25.80+17.00)/2	24.00	513.60	193.51	ಮೂಲೆ
18	ವಿಜಯನಗರ 4ನೇ ಹಂತ 2ನೇ ಘಟ್ಟ	3544	(12.15+11.70)/2	18.00	214.65	80.87	ಮೂಲೆ
19	ವಿಜಯನಗರ 4ನೇ ಹಂತ 2ನೇ ಘಟ್ಟ	4040	(8.30+11.20)/2	12.20	118.95	44.82	ಮೂಲೆ
20	ವಿಜಯನಗರ 4ನೇ ಹಂತ 2ನೇ ಘಟ್ಟ	4132	(7.60+8.30)/2	12.20	96.99	36.54	ಮೂಲೆ
21	ವಿಜಯನಗರ 4ನೇ ಹಂತ 2ನೇ ಘಟ್ಟ	5539	18.00	(7.00+7.50)/2	130.50	49.17	ಮೂಲೆ
22	ವಿಜಯನಗರ 4ನೇ ಹಂತ 2ನೇ ಘಟ್ಟ	6455	18.50	14.50	268.25	101.07	ಮೂಲೆ
23	ವಿಜಯನಗರ 1ನೇ ಹಂತ	37/ಎನ್	38.00	(17.90+6.90)/2	471.20	192.75	ಮಧ್ಯಂತರ
24	ವಿಜಯನಗರ 1ನೇ ಹಂತ	37/ಓ	14.60	(13.85+9.75)/2	172.28	70.47	ಮಧ್ಯಂತರ
25	ವಿಜಯನಗರ 1ನೇ ಹಂತ	864	(11.50+10.20)/2	26.30	285.35	122.87	ಮೂಲೆ
26	ವಿಜಯನಗರ 2ನೇ ಹಂತ	4300	9.00	(1.90+6.10)/2	36.00	15.50	ಮೂಲೆ
27	ವಿಜಯನಗರ 2ನೇ ಹಂತ	4438	9.00	4.40	39.60	17.05	ಮೂಲೆ
28	ವಿಜಯನಗರ 2ನೇ ಹಂತ	4452	9.00	7.50	67.50	27.61	ಮಧ್ಯಂತರ
29	ವಿಜಯನಗರ 2ನೇ ಹಂತ	5682/ಎ	18.00	10.50	189.00	81.38	ಮೂಲೆ
30	ದೇವನೂರು 1ನೇ ಹಂತ ಹುಡ್ಕೋ	38/ಡಿ	(8.00+7.00)/2	7.50	56.25	14.53	ಮೂಲೆ
31	ದೇವನೂರು 1ನೇ ಹಂತ ಹುಡ್ಕೋ	37/ಎ	9.00	7.50	67.50	15.99	ಮಧ್ಯಂತರ
32	ದೇವನೂರು 1ನೇ ಹಂತ ಹುಡ್ಕೋ	85/ಎ	9.00	7.00	63.00	14.92	ಮಧ್ಯಂತರ
33	ದೇವನೂರು 1ನೇ ಹಂತ ಹುಡ್ಕೋ	86/ಬಿ	(10.00+9.00)/2	7.00	66.50	17.18	ಮೂಲೆ
34	ದೇವನೂರು 3ನೇ ಹಂತ	750	9.00	12.00	108.00	23.25	ಮಧ್ಯಂತರ
35	ಮಹದೇವಪುರ ಹುಡ್ಕೋ	55	16.15	9.00	145.35	31.29	ಮಧ್ಯಂತರ
36	ಕೆಸರೆ 2ನೇ ಹಂತ	533/ಎ	9.00	(5.60+5.00)/2	47.70	13.35	ಮೂಲೆ
37	ಕೆಸರೆ 2ನೇ ಹಂತ	534/ಎ	9.00	(5.00+6.00)/2	49.50	13.85	ಮೂಲೆ
38	ನಾರ್ತ್ ಈಸ್ಟ್ ಆಫ್ ಎನ್.ಆರ್. ಮೊಹಲ್ಲಾ	554/ಎ	12.00	(16.00+15.00)/2	186.00	70.08	ಮೂಲೆ
39	ಸಾತಗಳ್ಳಿ 1ನೇ ಹಂತ	88	12.00	(4.00+20.00)/2	144.00	34.10	ಮೂಲೆ
40	ಸಾತಗಳ್ಳಿ 1ನೇ ಹಂತ	96	9.00	(24.00+12.00)/2	162.00	38.37	ಮೂಲೆ
41	ಸಾತಗಳ್ಳಿ 1ನೇ ಹಂತ	103	9.00	(7.00+15.00)/2	99.00	23.45	ಮೂಲೆ
42	ಸಾತಗಳ್ಳಿ 1ನೇ ಹಂತ	118	(13.00+8.50)/2	9.00	96.75	22.91	ಮೂಲೆ
43	ಸಾತಗಳ್ಳಿ 1ನೇ ಹಂತ	180/ಸಿ	12.00	9.00	108.00	25.58	ಮೂಲೆ
44	ಸಾತಗಳ್ಳಿ 1ನೇ ಹಂತ	223	12.00	(24.00+10.00)/2	204.00	48.31	ಮೂಲೆ
45	ಸಾತಗಳ್ಳಿ 1ನೇ ಹಂತ	1144	18.00	(12.00+13.50)/2	229.50	54.35	ಮೂಲೆ

ಇ–ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ.

ಇ–ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ : **www.mudamysore.gov.in** ನಲ್ಲಿ ಪರಿಶೀಲಿಸಬಹುದು ಹಾಗೂ ಕಛೇರಿ ವೇಳೆಯಲ್ಲಿ ಕಛೇರಿಯಲ್ಲಿ ಮಾಹಿತಿ ಪಡೆಯಬಹುದು.

1. ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು. **2.** ವಿಳಾಸದ ಸಾಬೀತಿಗಾಗಿ ಎ) ಮತದಾರರ ಗುರುತಿನ ಚೀಟಿಯ ಪ್ರತಿ, ಬಿ) ವಾಹನ ಚಾಲನೆಯ ಪರವಾನಗಿ ಪ್ರತಿ, ಸಿ) ಪಾಸ್‌ಪೋರ್ಟ್ ಪ್ರತಿ, ಡಿ)ಆಧಾರ ಕಾರ್ಡ್‌ನ ಪ್ರತಿ ಇವುಗಳನ್ನು ಗೆಜೆಟೆಡ್ ಅಧಿಕಾರಿ/ನೋಟರಿಯಿಂದ ದೃಢೀಕರಿಸಬೇಕು. ಭಾರತೀಯ ಅನಿವಾಸಿ ಆಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕರಿಸಿ ಮೇಲ್ಕಂಡ ದಾಖಲೆಗಳಲ್ಲಿ ಒಂದನ್ನು ಲಗತ್ತಿಸಬೇಕು. **3.** ಫೋಟೋ, ಸ್ಪೆಸಿಮನ್ ಸಹಿ ಕಡ್ಡಾಯವಾಗಿ ಲಗತ್ತಿಸಬೇಕು ಹಾಗೂ ಸರಿಯಾದ ದಾಖಲಾತಿಗಳನ್ನು ಲಗತ್ತಿಸದಿದ್ದಲ್ಲಿ ಬಿಡ್ದುದಾರರ ಬಿಡ್ಡನ್ನು ತಿರಸ್ಕರಿಸಲಾಗುವುದು. **4.** ಪ್ಯಾನ್ ಕಾರ್ಡ್ ಪ್ರತಿಯನ್ನು – ಗೆಜೆಟೆಡ್ ಅಧಿಕಾರಿ/ನೋಟರಿಯಿಂದ ದೃಢೀಕರಿಸಬೇಕು. ಭಾರತೀಯ ಅನಿವಾಸಿ ಆಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕರಿಸಿ ಲಗತ್ತಿಸಬೇಕು. **5.** ಇತ್ತೀಚಿನ ಭಾವಚಿತ್ರದ ಗುರುತು (Photo Identity) ಮತ್ತು ರುಜು ಗುರುತು ನಮೂನೆ (Specimen Signature) – ಗೆಜೆಟೆಡ್ ಅಧಿಕಾರಿ/ನೋಟರಿಯಿಂದ ದೃಢೀಕರಿಸಬೇಕು. ಭಾರತೀಯ ಅನಿವಾಸಿ ಆಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕರಿಸಿ ಲಗತ್ತಿಸಬೇಕು. (ನಿರ್ದಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಿರಿ https://www.eproc.karnataka.gov.in). **6.** ಇ–ಮೇಲ್ ವಿಳಾಸ, ಮೊಬೈಲ್ ದೂರವಾಣಿ ಸಂಖ್ಯೆ, ಸ್ಥಿರ ದೂರವಾಣಿ (ಲ್ಯಾಂಡ್ ಲೈನ್)ಸಂಖ್ಯೆ ಮತ್ತು ಪೂರ್ಣ ಅಂಚೆ ವಿಳಾಸವುಳ್ಳ ಮಾಹಿತಿಯ ನಮೂನೆಯನ್ನು ಲಗತ್ತಿಸಬೇಕು. (ನಿರ್ದಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಿರಿ https://www.eproc.karnataka.gov.in). **7.** ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್‌ಗಳು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್‌ಗಳು ಹರಾಜಿನಲ್ಲಿ ಭಾಗವಹಿಸುವ ಮುನ್ನ ತಮ್ಮ ಪಾಲುದಾರಿಕೆ ಸಂಸ್ಥೆಯ ನೊಂದಾವಣೆಯನ್ನು ಭಾರತ ದೇಶದಲ್ಲಿ ಮಾಡಿಕೊಂಡಿರಬೇಕು. **8.** ಹರಾಜಿನ ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಮೈಸೂರಿನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ. **9.** ಕ್ರ.ಸಂ.1, 6, 16, 17, 22, 23 ಮತ್ತು 25 ರ ನಿವೇಶನಗಳಿಗೆ ಇ.ಎಂ.ಡಿ.ಮೊತ್ತ ರೂ.3,00,000/– ಗಳು ಉಳಿದ ನಿವೇಶನಗಳಿಗೆ ಇ.ಎಂ.ಡಿ.ಮೊತ್ತ ರೂ.75,000/– ಮತ್ತು ಇ–ಹರಾಜಿನ ಶುಲ್ಕವನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐ.ಸಿ.ಐ.ಸಿ.ಐ ಬ್ಯಾಂಕ್‌ಗೆ ಪಾವತಿ ಮಾಡಬೇಕು. **10.** ಯಶಸ್ವಿ ಬಿಡ್‌ದಾರರು ಬಿಡ್ಡನ್ನು ಅಂಗೀಕೃತಗೊಂಡಿರುವ ಬಗ್ಗೆ ಇ–ಪೋರ್ಟಲ್ ಮುಖಾಂತರವೇ ಪರಿಶೀಲಿಸಿಕೊಂಡು, ಬಿಡ್‌ನ ಪೂರ್ಣ ಮೊಬಲಗಿನ ಪೈಕಿ ಶೇಕಡ 25% ರಷ್ಟು ಮೊತ್ತವನ್ನು (ಇ.ಎಂ.ಡಿ. ಮೊಬಲಗು ರೂ. 75,000/– ಅಥವಾ ರೂ.3,00,000/– ಗಳನ್ನು ಹೊರತುಪಡಿಸಿ) ಇ–ಹರಾಜು ಮುಕ್ತಾಯಗೊಂಡು ಬಿಡ್ ಅಂಗೀಕೃತಗೊಂಡ ಅವಧಿಯ ನಂತರದ 72 ಗಂಟೆಗೆ ಅಥವಾ ಅದರೊಳಗಾಗಿ ಈ ಕೆಳಕಂಡ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು (ಪಾವತಿ ಮಾಡಿದ ನಂತರ ಅದರ ಪ್ರತಿಯನ್ನು ಕಛೇರಿಗೆ ಸಲ್ಲಿಸುವುದು) ಜೊತೆಗೆ ಎನ್‌ಒಸಿಗಾಗಿ ರೂ.100/– ಗಳನ್ನು ಪಾವತಿಸತಕ್ಕದ್ದು. ಖಾತೆದಾರರ ಹೆಸರು (Account Holder) : ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಖಾತೆ ಸಂಖ್ಯೆ : 138501011000820 (ಐಎಫ್‌ಎಸ್‌ಸಿ ಕೋಡ್ ಸಂಖ್ಯೆ : VIJB0001385). ಬ್ಯಾಂಕ್‌ನ ಹೆಸರು : ವಿಜಯಬ್ಯಾಂಕ್, ಮೈಸೂರು ನಗರಾಭಿವೃದ್ಧಿ ಶಾಖೆ, ಮೈಸೂರು ಪಾವತಿಯ ರೀತಿ : ಆರ್‌ಟಿಜಿಎಸ್/ಎನ್‌ಇಎಫ್‌ಟಿ ಅಥವಾ ಪ್ರಾಧಿಕಾರಕ್ಕೆ ಖುದ್ದು ಹಾಜರಾಗಿ ಚಲನ್ ಪಡೆದು ಪಾವತಿಸಬಹುದಾಗಿದೆ. **11.** ಆರ್.ಟಿ.ಜಿ.ಎಸ್. ಮಾಡುವ ಯಶಸ್ವಿ ಬಿಡ್ದುದಾರರು ಶೇ.25 ಭಾಗ ಮತ್ತು 75 ಭಾಗ ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್. ಮಾಡತಕ್ಕದ್ದು. ಇತರೆಯವರ ಬ್ಯಾಂಕ್ ಖಾತೆಯಿಂದ ಆರ್.ಟಿ.ಜಿ.ಎಸ್. ಮಾಡಲು ಅವಕಾಶವಿರುವುದಿಲ್ಲ. ಆರ್.ಟಿ.ಜಿ.ಎಸ್. ಮಾಡುವಾಗ ಬಿಡ್ದುದಾರರ ಹೆಸರು, ಬಿಡ್ ಮಾಡಿದ ನಿವೇಶನ ಸಂಖ್ಯೆ ಮತ್ತು ಬಡಾವಣೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. **12.** ನಿವೇಶನ / ಮನೆಗಳನ್ನು ಎಲ್ಲಿ ಹೇಗಿವೆಯೋ ಹಾಗೆಯೇ ಹರಾಜಿಗೆ ಒಳಪಡಿಸಲಾಗುವುದು. **13.** ಬ್ಯಾಂಕ್ ಸೇವಾ ಶುಲ್ಕ ಇತ್ಯಾದಿಗಳನ್ನು ಬಿಡ್ದುದಾರರೇ ಭರಿಸತಕ್ಕದ್ದು. **14.** ಅಖೈರು ಬಿಡ್ದಾದ ನಂತರ ಸದರಿ ಬಿಡ್ಡನ್ನು ಅಂಗೀಕರಿಸುವ ಅಥವಾ ಯಾವುದೇ ಕಾರಣ ನೀಡದೆ, ತಿಳುವಳಿಕೆ ನೀಡದೆ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. **15.** ಈ ಹರಾಜನ್ನು ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಸುತ್ತೋಲೆ ಸಂಖ್ಯೆ ನ.ಅ.ಇ.291 ಎಂ.ಐ.ಬಿ.96/ದಿನಾಂಕ:24.11.2000 ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ವಿಲೇವಾರಿ ನಿಯಮ 1991ರ ರೀತ್ಯ ಕ್ರಮವಹಿಸಲಾಗುವುದು. **16.** ನಿವೇಶನಗಳ ಸ್ಥಳ, ವಿವರಕ್ಕೆ ಮತ್ತು ಇತರೆ ಮಾಹಿತಿಗಳಿಗೆ https://eproc.karnataka.gov.in ಲಾಗಿನ್ ಆಗಿ ಪಡೆಯಬಹುದು. **17.** ಕ್ರ.ಸಂ.1, 6, 16, 17, 22, 23 ಮತ್ತು 25 ನಿವೇಶನಗಳಿಗೆ ಕನಿಷ್ಠ ಬಿಡ್ ಬದಲಾವಣೆ ಮೊತ್ತ ರೂ.1,00,000/– ಗಳಾಗಿದ್ದು, ಉಳಿದ ನಿವೇಶನಗಳಿಗೆ ಕನಿಷ್ಠ ಬಿಡ್ ಬದಲಾವಣೆ ಮೊತ್ತ ರೂ.10,000/– ಗಳಾಗಿರುತ್ತದೆ. **18.** ಯಾವುದೇ ಬದಲಾವಣೆಗಳಿದ್ದಲ್ಲಿ ವೆಬ್‌ಸೈಟ್ ಮೂಲಕ ಮಾತ್ರವೇ ಪ್ರಕಟಿಸಲಾಗುವುದು. **19.** ಯಶಸ್ವಿ ಬಿಡ್ದುದಾರರು ಶೇಕಡ 25% ಬಿಡ್ಡು ಮೊತ್ತವನ್ನು ನಿಗಧಿತ ಅವಧಿಯಲ್ಲಿ ಪಾವತಿಸದೇ ಇದ್ದಲ್ಲಿ ಸದರಿಯವರ ಪಾವತಿಸಿರುವ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. **20.** ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಳಿಸಿದ ನಂತರ ಇ.ಎಂ.ಡಿ. ಮೊತ್ತವನ್ನು eproc.karnataka.gov of Karnataka ರವರು ಹಿಂದಿರುಗಿಸಲು ಕ್ರಮವಹಿಸುತ್ತಾರೆ. **21.** ಪ್ರತಿ ನಿವೇಶನ / ಮನೆ ಹರಾಜಿನಲ್ಲಿ ಕನಿಷ್ಠ ಎರಡು ಜನ ಭಾಗವಹಿಸಬೇಕಾಗಿರುತ್ತದೆ. **22.** ಇ–ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ 5 ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ. ಉದಾ: ಇ–ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಅಂತಿಮ ಸಮಯ 6.00 ಎಂದಿದ್ದಲ್ಲಿ ಅದನ್ನು 5.57 ಗಂಟೆಗಳಿಂದ ಪ್ರಾರಂಭಿಸಿ, 6.02 ಘಂಟೆಗಳ ವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಮತ್ತೆ ಯಾರಾದರೂ ಬಿಡ್ಡದಾರರು ಬಿಡ್ಡನ್ನು 6.01 ಘಂಟೆಗೆ ಮಾಡಿದ್ದಲ್ಲಿ 6.06 ವರೆಗೆ ಅವಧಿ ವಿಸ್ತರಣೆಯಾಗುತ್ತದೆ. **23.** ಇ–ಹರಾಜಿನಲ್ಲಿ ಭಾಗವಹಿಸಿ ನಿವೇಶನ ಪಡೆಯಲು ಅನುಸರಿಸಬೇಕಾದ ಕ್ರಮದ ಬಗ್ಗೆ ಮಾಹಿತಿ ಭೇಕಾದಲ್ಲಿ https://eproc.karnataka.gov.in ಗೆ ಲಾಗಿನ್ ಆಗಿ ಮುಖ ಪುಟದ ಉಣುದಜಟಿ ವಿಭಾಗದಲ್ಲಿ ಲಭ್ಯವಿರುವ Simplified e-Auction user guide ಅನ್ನು Download ಮಾಡಿಕೊಳ್ಳಬಹುದಾಗಿದೆ. **24.** ಇಎಂಡಿ ಮೊಬಲಗು ಮತ್ತು ಇ–ಹರಾಜು ಪ್ರಕ್ರಿಯೆ ಶುಲ್ಕವನ್ನು ಐ.ಸಿ.ಐ.ಸಿ.ಐ. ಬ್ಯಾಂಕ್ ಅಥವಾ ಮೈಸೂರು1 / ಕರ್ನಾಟಕ1 ಕ್ರೆಡಿಟ್ ಕಾರ್ಡ್ ಮುಖಾಂತರ ಪಾವತಿಸಬಹುದಾಗಿದೆ. **25.** ಅಂತಿಮವಾಗಿ ನಿವೇಶನ / ಮನೆಯನ್ನು ಬಿಡ್ದುದಾರರಿಗೆ ಹಸ್ತಾಂತರಿಸುವ ಸಮಯದಲ್ಲಿ ಅಳತೆ ಕಡಿಮೆ ಇದ್ದ ಸಂದರ್ಭದಲ್ಲಿ ಬಿಡ್ದುದಾರರ ಒಪ್ಪಿಗೆ ಪಡೆದು ಬಿಡ್ ಆಗಿರುವ ದರದಲ್ಲಿಯೇ ಕಡಿಮೆ ವಿಸ್ತೀರ್ಣಕ್ಕೆ ಹಣ ಮರು ಪಾವತಿಸಲಾಗುವುದು. ಒಂದು ವೇಳೆ ಬಿಡ್ದುದಾರರು ಒಪ್ಪದಿದ್ದ ಸಂದರ್ಭದಲ್ಲಿ ಸದರಿ ಹರಾಜನ್ನು ರದ್ದುಪಡಿಸಲಾಗುವುದು ಮತ್ತು ನಿವೇಶನ / ಮನೆಯ ಅಳತೆ ಹೆಚ್ಚಾಗಿ ಇದ್ದ ಸಂದರ್ಭದಲ್ಲಿ ಬಿಡ್ ಆಗಿರುವ ದರದಲ್ಲಿಯೇ ಹೆಚ್ಚುವರಿ ವಿಸ್ತೀರ್ಣಕ್ಕೆ ಹಣ ಪಾವತಿಸಿಕೊಳ್ಳಲಾಗುವುದು. ಇದಕ್ಕೆ ಬಿಡ್ದುದಾರರು ಒಪ್ಪದಿದ್ದ ಸಂದರ್ಭದಲ್ಲಿ ನಿವೇಶನದ ಪೂರ್ಣ ಮೊಬಲಗಿನ ಪೈಕಿ ಶೇಕಡ 25% ರಷ್ಟು ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಹರಾಜನ್ನು ರದ್ದುಪಡಿಸಿ ಉಳಿಕೆ ಹಣವನ್ನು ಮರು ಪಾವತಿಸಲಾಗುವುದು. **26.** ಇ–ಹರಾಜಿನಲ್ಲಿ ಆನ್‌ಲೈನ್ ಮೂಲಕ ಭಾಗವಹಿಸುವುದಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆಯಲು ಪ್ರಾಧಿಕಾರದ ಅಧೀಕ್ಷಕ ಅಭಿಯಂತರರ ಕಛೇರಿಯ ದೂರವಾಣಿ ಸಂಖ್ಯೆ : 0821–2421629 ಗೆ ಕರೆ ಮಾಡಬಹುದಾಗಿದೆ.

ಸಹಿ/– ಅಭಿಯಂತರ ಸದಸ್ಯರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು